# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 672 (759)
ಮಾನ್ಯ ಸದಸ್ಯರ ಹೆಸರು : ಶ್ರೀ. ಮರಿತಿಬ್ಬೇಗೌಡ (ಶಿಕ್ಷಣ ಕ್ಷೇತ್ರ)
ಉತ್ತರಿಸುವ ದಿನಾಂಕ : 12.12.2023
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 5 ವರ್ಷಗಳಿಂದ ಕೆ.ಐ.ಎ.ಡಿ.ಬಿ.ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂಸ್ವಾಧೀನಾಧಿಕಾರಿಗಳ ವಿರುದ್ಧ ಲೋಕಾಯುಕ್ತ ತನಿಖೆ ನಡೆಸಲಾಗುತ್ತಿದೆಯೇ; (ಪೂರ್ಣ ವಿವರ ನೀಡುವುದು) | ಸರ್ಕಾರವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ 5 ವರ್ಷಗಳಲ್ಲಿ ನಿಯೋಜಿಸಲಾದ ವಿಶೇಷ ಭೂಸ್ವಾಧೀನಾಧಿಕಾರಿಗಳ ಪೈಕಿ 08 ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಇಲಾಖೆಯಲ್ಲಿ ಒಟ್ಟು 9 ಪ್ರಕರಣಗಳು ದಾಖಲಾಗಿರುತ್ತವೆ.<br><br>ಈ ಪೈಕಿ, ಕರ್ನಾಟಕ ಲೋಕಾಯುಕ್ತ ಇಲಾಖೆಯಲ್ಲಿ ದಾವೆ / ದೂರು ದಾಖಲಾಗಿರುವ ವಿಶೇಷ ಭೂಸ್ವಾಧೀನಾಧಿಕಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಆ) | ಸದರಿ ಅಧಿಕಾರಿಗಳ ವಿರುದ್ಧ ಹಲವು ತನಿಖಾ ಪ್ರಕರಣಗಳು ಬಾಕಿ ಇದ್ದರೂ, ಅವರುಗಳನ್ನು ಮತ್ತೆ ಭೂಸ್ವಾಧೀನ ಅಧಿಕಾರಿಗಳ ಹುದ್ದೆಯಲ್ಲಿ ಮುಂದುವರೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಲೋಕಾಯುಕ್ತ ಇಲಾಖೆಯಲ್ಲಿ ದಾವೆ/ ದೂರು ದಾಖಲಾದ 8 ಅಧಿಕಾರಿಗಳ ಪೈಕಿ, 6 ಅಧಿಕಾರಿಗಳನ್ನು ಸರ್ಕಾರದ ಆದೇಶ/ ಅಧಿಸೂಚನೆಗಳನ್ವಯ ಈಗಾಗಲೇ ಮಂಡಳಿಯ ನಿಯೋಜನಾ ಸೇವೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ. |
| (ಇ) | ಹಾಗಿದ್ದಲ್ಲಿ, ಎಷ್ಟು ಅಧಿಕಾರಿಗಳು ಈ ರೀತಿ ಕಾರ್ಯ ನಿರ್ವಹಿಸುತ್ತಿದ್ದಾರೆ; (ಪೂರ್ಣ ವಿವರ ನೀಡುವುದು) | |
| (ಈ) | ಸದರಿ ಅಧಿಕಾರಿಗಳನ್ನು ಮುಂದುವರೆಸುತ್ತಿರಲು ಕಾರಣವೇನು; | ಕರ್ನಾಟಕ ಲೋಕಾಯುಕ್ತ ಪ್ರಕರಣದಲ್ಲಿ ಕೃತ್ಯ ಜರುಗಿದ/ದಾವೆ ದಾಖಲಾದ ನಂತರ, ಸರ್ಕಾರದ ಆದೇಶ/ ಅಧಿಸೂಚನೆಗಳನ್ವಯ ಎಲ್ಲಾ 8 ಅಧಿಕಾರಿಗಳನ್ನು ಅಂದರೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಬಾಳಪ್ಪ |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಹಂದಿಗುಂದ (ದಿನಾಂಕ:15.06.2021 ರಂದು) ಮತ್ತು ಶ್ರೀ.ಎನ್.ತೇಜಸ್ ಕುಮಾರ್ (ದಿನಾಂಕ:28.01.2022 ರಂದು) ಇವರನ್ನು ಸೇರಿದಂತೆ ಮಂಡಳಿಯ ನಿಯೋಜನೆ ಸೇವೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ.<br>ನಂತರ, ಶ್ರೀ.ಬಾಳಪ್ಪ ಹಂದಿಗುಂದ ಇವರನ್ನು ಸರ್ಕಾರವು ಅಧಿಸೂಚನೆ ದಿನಾಂಕ:03.08.2022 ರನ್ವಯ ವಿಶೇಷ ಭೂಸ್ವಾಧೀನಾಧಿಕಾರಿ-2, ಬಿಎಂಐಸಿಪಿ, ಕೆಐಎಡಿಬಿ, ವಲಯ ಕಛೇರಿ, ಬೆಂಗಳೂರು ಹುದ್ದೆಗೆ ಮತ್ತು ಶ್ರೀ.ಎನ್.ತೇಜಸ್ ಕುಮಾರ್ ಇವರನ್ನು ದಿನಾಂಕ:12.07.2023 ರಂದು ವಿಶೇಷ ಭೂಸ್ವಾಧೀನಾಧಿಕಾರಿ-2, ಮೆಟ್ರೋ ರೈಲು ಯೋಜನೆ, ಕೆಐಎಡಿಬಿ, ವಲಯ ಕಛೇರಿ, ಬೆಂಗಳೂರು ಹುದ್ದೆಗೆ ನಿಯೋಜಿಸಿರುತ್ತದೆ.</td></tr>
<tr><td>(ಉ)</td><td>ಯಾವ ಕಾಲಮಿತಿಯಲ್ಲಿ ಸದರಿ ಅಧಿಕಾರಿಗಳನ್ನು ಮಂಡಳಿಯಿಂದ ವರ್ಗಾಯಿಸಲಾಗುವುದು;</td><td rowspan="3">ದಾವೆ/ದೂರು ದಾಖಲಾದ ಪ್ರಕರಣಗಳ ಪೈಕಿ 3 ಪ್ರಕರಣಗಳಲ್ಲಿ ಈಗಾಗಲೇ ಸರ್ಕಾರಕ್ಕೆ ತನಿಖಾ ವರದಿಗಳನ್ನು ಸಲ್ಲಿಸಲಾಗಿದ್ದು, ಉಳಿದಂತೆ ಟ್ರ್ಯಾಪ್ ಮಾಡಲಾದ ಪ್ರಕರಣಗಳಲ್ಲಿ, ಕರ್ನಾಟಕ ಲೋಕಾಯುಕ್ತವು ತನಿಖೆ ನಡೆಸುತ್ತಿರುತ್ತದೆ. ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.</td></tr>
<tr><td>(ಊ)</td><td>ಯಾವ ಅಧಿಕಾರಿ / ನೌಕರರ ವಿರುದ್ಧ ಕ್ರಮ ಕೈಗೊಳ್ಳಲಾಗಿರುವುದಿಲ್ಲ; (ಪೂರ್ಣ ವಿವರ ನೀಡುವುದು)</td></tr>
<tr><td>(ಋ)</td><td>ಸದರಿ ಪ್ರಕರಣ ಸಂಬಂಧ ಇದುವರೆವಿಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)</td></tr>
</table>

ಸಂಖ್ಯೆ: ಸಿಐ 335 ಐಎಪಿ 2023

(ಎಂ.ಬಿ. ಪಾಟೀಲ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ

ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

ಅನುಬಂಧ - 1

ಅನುಬಂಧ - 1

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

**ದಿನಾಂಕ: 01.10.2018 ರಿಂದ ಇಲ್ಲಿಯವರೆಗೆ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸಿದ/ ನಿರ್ವಹಿಸುತ್ತಿರುವ ವಿಶೇಷ ಭೂಸ್ವಾಧೀನಾಧಿಕಾರಿಗಳ ಪೈಕಿ ಮಾನ್ಯ ಕರ್ನಾಟಕ ಲೋಕಾಯುಕ್ತ ಇಲ್ಲಿ ದೂರು/ದಾವೆ ದಾಖಲಾಗಿರುವ ಅಧಿಕಾರಿಗಳ ಪಟ್ಟಿ.**

| ಕ್ರ. ಸಂ. | ಅಧಿಕಾರಿಗಳ ಹೆಸರು ಶ್ರೀ / ಶ್ರೀಮತಿ | ದಾವೆ ದಾಖಲಾದ ಅವಧಿಯಲ್ಲಿ ನಿರ್ವಹಿಸುತ್ತಿದ್ದ ಹುದ್ದೆ | ದೂರು ಸಲ್ಲಿಸಲಾದ ಪ್ರಾಧಿಕಾರ ಮತ್ತು ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣದ ಪ್ರಸ್ತುತ ಸ್ಥಿತಿ |
|---|---|---|---|---|---|
| 1 | ಎ.ಬಿ.ವಿಜಯಕುಮಾರ್ ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ (ಮೆಟ್ರೋ), ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಬೆಂಗಳೂರು | ಭ್ರಷ್ಟಾಚಾರ ನಿಗ್ರಹ ದಳ ಪಿಟಿಷನ್ ಸಂ:730/2020 | ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮ ಇಲ್ಲಿ ಮಂಡಳಿಯು ಸ್ವಾಧೀನಪಡಿಸಿಕೊಂಡಿರುವ 08 ಗುಂಟೆ ವಿಸ್ತೀರ್ಣದ ಜಮೀನಿನ ಭೂಪರಿಹಾರವನ್ನು ನಕಲಿ ವಾರಸುದಾರರಿಗೆ ಪಾವತಿ ಮಾಡಿರುವ ಬಗ್ಗೆ. | ಈ ಪ್ರಕರಣದ ಕುರಿತು ತನಿಖೆ ನಡೆಸಿ, ದಿನಾಂಕ:16.08.2021 ರಂದು ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.<br>ಶ್ರೀ.ಎ.ಬಿ.ವಿಜಯಕುಮಾರ್, ಕೆ.ಎ.ಎಸ್. ಇವರನ್ನು ದಿನಾಂಕ:21.09.2022 ರಂದು ಮಂಡಳಿಯ ನಿಯೋಜನಾ ಸೇವೆಯ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿರುತ್ತದೆ. |
| 2. | ಡಾ|| ಎಂ.ದಾಸೇಗೌಡ, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಮಂಗಳೂರು | ಭ್ರಷ್ಟಾಚಾರ ನಿಗ್ರಹ ದಳ ಮೊಕದ್ದಮೆ ಸಂ:12/2019 | ಪೆರ್ಮುದೆ ಗ್ರಾಮದ ಸರ್ವೆ ನಂ:1/2ಪಿ ರಲ್ಲಿ ಸ್ವಾಧೀನಪಡಿಸಲಾದ 1.08 ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ಭೂಪರಿಹಾರ ಪಾವತಿಸಲು ಲಂಚದ ಹಣ ಬೇಡಿಕೆ ಇಟ್ಟು, ಭ್ರಷ್ಟಾಚಾರ ನಿಗ್ರಹ ದಳವು ದಿನಾಂಕ:18.12.2019 ರಂದು ಟ್ರ್ಯಾಪ್ ಮಾಡಿರುವ ಬಗ್ಗೆ. | ಡಾ|| ಎಂ.ದಾಸೇಗೌಡ, ಕೆ.ಎ.ಎಸ್. ಇವರು ಪ್ರಸ್ತಾವಿತ ಪ್ರಕರಣದಲ್ಲಿ ಲೋಕಾಯುಕ್ತರವರು ನಡೆಸಲಾದ ಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದಿರುತ್ತಾರೆ. ನಂತರ, ದಿನಾಂಕ:08.01.2020 ರಂದು ಸರ್ಕಾರವು ಸದರಿ ಹುದ್ದೆಗೆ ಶ್ರೀ.ಬಿನೋಯ್.ಪಿ.ಕೆ. ಇವರನ್ನು ನಿಯೋಜಿಸಿರುತ್ತದೆ.<br>ಪ್ರಸ್ತುತ ಈ ಪ್ರಕರಣವು ಮಾನ್ಯ ಕರ್ನಾಟಕ ಲೋಕಾಯುಕ್ತದಲ್ಲಿ ವಿಚಾರಣೆಯಲ್ಲಿರುತ್ತದೆ. |

| ಕ್ರ. ಸಂ. | ಅಧಿಕಾರಿಗಳ ಹೆಸರು ಶ್ರೀ / ಶ್ರೀಮತಿ | ದಾವೆ ದಾಖಲಾದ ಅವಧಿಯಲ್ಲಿ ನಿರ್ವಹಿಸುತ್ತಿದ್ದ ಹುದ್ದೆ | ದೂರು ಸಲ್ಲಿಸಲಾದ ಪ್ರಾಧಿಕಾರ ಮತ್ತು ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣದ ಪ್ರಸ್ತುತ ಸ್ಥಿತಿ |
|---|---|---|---|---|---|
| 3. | ಭಾರತಿ, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ-1 (ಮೆಟ್ರೋ), ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಬೆಂಗಳೂರು | ಭ್ರಷ್ಟಾಚಾರ ನಿಗ್ರಹ ದಳ ಪಿಟಿಷನ್ ಸಂ:425/2021 | ಬೆಂಗಳೂರು ನಗರ ಜಿಲ್ಲೆ, ಕೆ.ಆರ್.ಪುರ ಹೋಬಳಿ, ವಿಜಿನಾಪುರ ಗ್ರಾಮದ ಸರ್ವೆ ನಂ. 87 ಮತ್ತು 90ರ ಜಮೀನುಗಳಿಗೆ ಸಂಬಂಧಿಸಿದಂತೆ ಭೂಪರಿಹಾರ ಪಾವತಿಸುವಲ್ಲಿ ಅಕ್ರಮ ಎಸಗಿರುವ ಬಗ್ಗೆ. | ಶ್ರೀಮತಿ.ಭಾರತಿ, ಕೆ.ಎ.ಎಸ್. ಇವರು ದಿನಾಂಕ:30.06.2021 ರಂದು ವಯೋನಿವೃತ್ತಿ ಹೊಂದಿದ್ದು, ಮಂಡಳಿಯ ಸೇವೆಯಿಂದ ಬಿಡುಗಡೆ ಮಾಡಲಾಗಿರುತ್ತದೆ.<br>ಈ ಪ್ರಕರಣದ ಕುರಿತು ತನಿಖೆ ನಡೆಸಿ, ದಿನಾಂಕ:19.02.2022 ರಂದು ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. |
| 4. | ಎನ್.ತೇಜಸ್ ಕುಮಾರ್, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ-1, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಬೆಂಗಳೂರು | ಭ್ರಷ್ಟಾಚಾರ ನಿಗ್ರಹ ದಳ ಮೊಕದ್ದಮೆ ಸಂ: 31/2021 | ಮಲ್ಲಾಪುರ ಗ್ರಾಮದ ಸರ್ವೆ ನಂ.40/ಪಿ63 ರಲ್ಲಿ 27 ಗುಂಟೆ ಮತ್ತು ಮಾರಪ್ಪಲ್ಲಿ ಗ್ರಾಮದ ಸರ್ವೆ ನಂ.76/ಪಿ5 ರಲ್ಲಿ 30 ಗುಂಟೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ಭೂಪರಿಹಾರ ಪಾವತಿ ಮಾಡಲು ಲಂಚದ ಹಣ ಬೇಡಿಕೆ ಇಟ್ಟಿದ್ದು, ಭ್ರಷ್ಟಾಚಾರ ನಿಗ್ರಹ ದಳವು ದಿನಾಂಕ:20.09.2021 ರಂದು ನಡೆಸಲಾದ ಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದಿರುವ ಬಗ್ಗೆ. | ಶ್ರೀ.ಎನ್.ತೇಜಸ್ ಕುಮಾರ್, ಕೆ.ಎ.ಎಸ್. ಇವರು ಪ್ರಸ್ತಾವಿತ ಪ್ರಕರಣದಲ್ಲಿ ಲೋಕಾಯುಕ್ತರವರು ನಡೆಸಲಾದ ಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದಿರುತ್ತಾರೆ. ನಂತರ, ದಿನಾಂಕ:24.09.2021 ರಂದು ಸರ್ಕಾರವು ಸದರಿ ಹುದ್ದೆಗೆ ಶ್ರೀ.ಪ್ರಸನ್ನಕುಮಾರ್.ವಿ.ಕೆ. ಇವರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಿರುತ್ತದೆ.<br>ನಂತರದಲ್ಲಿ, ಸರ್ಕಾರವು ಶ್ರೀ.ಎನ್.ತೇಜಸ್ ಕುಮಾರ್, ಕೆ.ಎ.ಎಸ್. ಇವರನ್ನು ದಿನಾಂಕ:12.07.2023 ರಂದು ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ (ಮೆಟ್ರೋ), ವಲಯ ಕಛೇರಿ, ಬೆಂಗಳೂರು ಹುದ್ದೆಗೆ ನಿಯೋಜಿಸಿರುತ್ತದೆ.<br>ಪ್ರಸ್ತುತ ಈ ಪ್ರಕರಣವು ಮಾನ್ಯ ಕರ್ನಾಟಕ |

| ಕ್ರ. ಸಂ. | ಅಧಿಕಾರಿಗಳ ಹೆಸರು ಶ್ರೀ / ಶ್ರೀಮತಿ | ದಾವೆ ದಾಖಲಾದ ಅವಧಿಯಲ್ಲಿ ನಿರ್ವಹಿಸುತ್ತಿದ್ದ ಹುದ್ದೆ | ದೂರು ಸಲ್ಲಿಸಲಾದ ಪ್ರಾಧಿಕಾರ ಮತ್ತು ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣದ ಪ್ರಸ್ತುತ ಸ್ಥಿತಿ |
|---|---|---|---|---|---|
| | | | | | ಲೋಕಾಯುಕ್ತದಲ್ಲಿ ವಿಚಾರಣೆಯಲ್ಲಿರುತ್ತದೆ. |
| 5. | ಜಿ.ಡಿ. ಶೇಖರ್, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ದಾವಣಗೆರೆ | ಕರ್ನಾಟಕ ಲೋಕಾಯುಕ್ತ ಮೊಕದ್ದಮೆ ಸಂ. 03/2023 | ಹಾವೇರಿ ತಾಲ್ಲೂಕು, ಕೋಳೂರು ಗ್ರಾಮದ ಸರ್ವೆ ನಂ.105/ಅ/6 ರಲ್ಲಿ ಸ್ವಾಧೀನಪಡಿಸಲಾದ 1.00 ಎಕರೆ 01 ಗುಂಟೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ, ಭೂಪರಿಹಾರ ಪಾವತಿಸಲು ಲಂಚದ ಹಣದ ಬೇಡಿಕೆ ಇಟ್ಟು, ದಿನಾಂಕ:20.01.2023 ರಂದು ಲೋಕಾಯುಕ್ತ ಇವರು ನಡೆಸಲಾದ ಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದಿರುವ ಬಗ್ಗೆ. | ಶ್ರೀ.ಜಿ.ಡಿ.ಶೇಖರ್, ಕೆ.ಎ.ಎಸ್, ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ವಲಯ ಕಛೇರಿ, ದಾವಣಗೆರೆ ಇವರು ಪ್ರಸ್ತಾವಿತ ಪ್ರಕರಣದಲ್ಲಿ ಲೋಕಾಯುಕ್ತರವರು ನಡೆಸಲಾದ ಟ್ರ್ಯಾಪ್‌ನಲ್ಲಿ ಸಿಕ್ಕಿಬಿದ್ದಿರುತ್ತಾರೆ. ನಂತರ, ಸದರಿ ಹುದ್ದೆಗೆ ಶ್ರೀಮತಿ.ತಬಸ್ಸುಮ್ ಜಹೇರಾ ಇವರನ್ನು ದಿನಾಂಕ:02.02.2023 ರಂದು ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿರುತ್ತದೆ.<br><br>ಈ ಪ್ರಕರಣದಲ್ಲಿ, ಸರ್ಕಾರವು ಶ್ರೀ.ಜಿ.ಡಿ.ಶೇಖರ್ ಇವರನ್ನು ದಿನಾಂಕ:16.03.2023 ರಂದು ಅಮಾನತ್ತಿನಲ್ಲಿರಿಸಿ ಆದೇಶಿಸಿರುತ್ತದೆ.<br><br>ಪ್ರಸ್ತುತ ಈ ಪ್ರಕರಣವು ಮಾನ್ಯ ಕರ್ನಾಟಕ ಲೋಕಾಯುಕ್ತದಲ್ಲಿ ವಿಚಾರಣೆಯಲ್ಲಿರುತ್ತದೆ. |
| 6. | ಶಿವಪ್ಪ ಯಲ್ಲಪ್ಪ ಬಜಂತ್ರಿ, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಧಾರವಾಡ | ಕರ್ನಾಟಕ ಲೋಕಾಯುಕ್ತ ಮೊಕದ್ದಮೆ ಸಂ. 03/2023 | ಕಣಗಲಾ ಗ್ರಾಮದ ಸರ್ವೆ ನಂ. 298ಕ್ಕೆ ಸಂಬಂಧಿಸಿದಂತೆ ಅಕ್ರಮ ಭೂಪರಿಹಾರ ಪಾವತಿಸಿರುವುದಾಗಿ ದೂರು ದಾಖಲಾಗಿರುವ ಬಗ್ಗೆ. | ಶ್ರೀ.ಶಿವಪ್ಪ ಯಲ್ಲಪ್ಪ ಬಜಂತ್ರಿ, ಕೆ.ಎ.ಎಸ್. ಇವರನ್ನು ದಿನಾಂಕ:13.08.2018 ರಂದು ಮಂಡಳಿಯ ನಿಯೋಜನಾ ಸೇವೆಯ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿರುತ್ತದೆ.<br><br>ಈ ಪ್ರಕರಣದ ಕುರಿತು ತನಿಖೆ ನಡೆಸಿ, ದಿನಾಂಕ:05.02.2021 ರಂದು ತನಿಖಾ |

| ಕ್ರ. ಸಂ. | ಅಧಿಕಾರಿಗಳ ಹೆಸರು ಶ್ರೀ / ಶ್ರೀಮತಿ | ದಾವೆ ದಾಖಲಾದ ಅವಧಿಯಲ್ಲಿ ನಿರ್ವಹಿಸುತ್ತಿದ್ದ ಹುದ್ದೆ | ದೂರು ಸಲ್ಲಿಸಲಾದ ಪ್ರಾಧಿಕಾರ ಮತ್ತು ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣದ ಪ್ರಸ್ತುತ ಸ್ಥಿತಿ |
|---|---|---|---|---|---|
| | | | | | ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. |
| 7. | ಬಾಳಪ್ಪ ಹಂದಿಗುಂದ, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ-2 (ಮೆಟ್ರೋ), ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಬೆಂಗಳೂರು | ಭ್ರಷ್ಟಾಚಾರ ನಿಗ್ರಹ ದಳ ಪಿಟಿಷನ್ ಸಂ: 640/2020 | ಕೆಂಗೇರಿ ಗ್ರಾಮದ ಸರ್ವೆ ನಂ.159 ಮತ್ತು 161 ಹಾಗೂ ಚಳ್ಳಘಟ್ಟ ಗ್ರಾಮದ ಸರ್ವೆ ನಂ.21ರ ಜಮೀನನ್ನು ಬೆಂಗಳೂರು ಮೆಟ್ರೋ ರೈಲು ಯೋಜನೆಗಾಗಿ ಭೂಸ್ವಾಧೀನಪಡಿಸಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ ಭೂಪರಿಹಾರ ಪಾವತಿಸುವಲ್ಲಿ ಅಕ್ರಮ ಎಸಗಿರುವ ಬಗ್ಗೆ. | ಈ ಪ್ರಕರಣದಲ್ಲಿ ವಿಚಾರಣೆ ನಡೆಸಲಾಗುತ್ತಿದ್ದು, ಶೀಘ್ರದಲ್ಲಿಯೇ ವಿಚಾರಣ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. |
| | | ವಿಶೇಷ ಭೂಸ್ವಾಧೀನಾಧಿಕಾರಿ-2 (ಬಿ.ಎಂ.ಐ.ಸಿ.ಪಿ), ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಬೆಂಗಳೂರು | | ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಹಾದಿಹೊಸಹಳ್ಳಿ ಗ್ರಾಮದ ಸರ್ವೆ ನಂ.38/2 ರಲ್ಲಿನ 0.27 ಗುಂಟೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನಕಲಿ ವಂಶವೃಕ್ಷದ ಆಧಾರದ ಮೇಲೆ ಭೂಪರಿಹಾರ ಪಾವತಿಸಿರುವ ಬಗ್ಗೆ. | ಈ ಪ್ರಕರಣದಲ್ಲಿ ಶ್ರೀ.ಬಾಳಪ್ಪ ಹಂದಿಗುಂದ, ಕೆ.ಎ.ಎಸ್., ವಿಶೇಷ ಭೂಸ್ವಾಧೀನಾಧಿಕಾರಿ-2 (ಬಿ.ಎಂ.ಐ.ಸಿ.ಪಿ), ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಇವರ ವಿರುದ್ಧ ವಿಚಾರಣೆ ನಡೆಸುವ ಸಲುವಾಗಿ ದೋಷಾರೋಪಣಾ ಪಟ್ಟಿಗಳನ್ನು ಜಾರಿ ಮಾಡಲಾಗುತ್ತಿದೆ.<br>ಶ್ರೀ.ಬಾಳಪ್ಪ ಹಂದಿಗುಂದ ಇವರನ್ನು ಸರ್ಕಾರದ ಅಧಿಸೂಚನೆಯಂತೆ, ದಿನಾಂಕ:15.06.2021 ರಂದು ವಿಶೇಷ ಭೂಸ್ವಾಧೀನಾಧಿಕಾರಿ-1 ಹುದ್ದೆಯಿಂದ ಬಿಡುಗಡೆ ಮಾಡಲಾಗಿತ್ತು.<br>ನಂತರ, ಸರ್ಕಾರವು ಅಧಿಸೂಚನೆ ದಿನಾಂಕ:03.08.2022 ರಂದು ಶ್ರೀ.ಬಾಳಪ್ಪ |

| ಕ್ರ. ಸಂ. | ಅಧಿಕಾರಿಗಳ ಹೆಸರು ಶ್ರೀ / ಶ್ರೀಮತಿ | ದಾವೆ ದಾಖಲಾದ ಅವಧಿಯಲ್ಲಿ ನಿರ್ವಹಿಸುತ್ತಿದ್ದ ಹುದ್ದೆ | ದೂರು ಸಲ್ಲಿಸಲಾದ ಪ್ರಾಧಿಕಾರ ಮತ್ತು ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣದ ಪ್ರಸ್ತುತ ಸ್ಥಿತಿ |
|---|---|---|---|---|---|
| | | | | | ಹಂದಿಗುಂದ ಇವರನ್ನು ವಿಶೇಷ ಭೂಸ್ವಾಧೀನಾಧಿಕಾರಿ-2, ಬಿಎಂಐಸಿಪಿ, ಕೆಐಎಡಿಬಿ, ವಲಯ ಕಛೇರಿ, ಬೆಂಗಳೂರು ಹುದ್ದೆಗೆ ವರ್ಗಾಯಿಸಿರುತ್ತದೆ.<br>ಅದರಂತೆ, ಸದರಿಯವರು ದಿನಾಂಕ:29.08.2022 ರಿಂದ ವಿಶೇಷ ಭೂಸ್ವಾಧೀನಾಧಿಕಾರಿ-2, ಬಿಎಂಐಸಿಪಿ, ಕೆಐಎಡಿಬಿ, ವಲಯ ಕಛೇರಿ, ಬೆಂಗಳೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |
| 8. | ವಿ.ಡಿ. ಸಜ್ಜನ್, ಕೆ.ಎ.ಎಸ್. | ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ. ವಲಯ ಕಛೇರಿ, ಧಾರವಾಡ | | ಕೆಲಗೇರಿ, ಮಮ್ಮಿಗಟ್ಟಿ ಮತ್ತು ಕೋಟೂರು ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಪೈಕಿ ಕೆಲಗೇರಿ ಗ್ರಾಮದ ಸರ್ವೆ ನಂ.731/2, 707, 720, 711, 708, 714, 718, 709, ಮಮ್ಮಿಗಟ್ಟಿ ಗ್ರಾಮದ ಸರ್ವೆ ನಂ: 150 ಮತ್ತು ಕೋಟೂರು ಗ್ರಾಮದ ಸರ್ವೆ ನಂ: 635 ರಲ್ಲಿನ ಜಮೀನುಗಳಿಗೆ ಒಟ್ಟು ರೂ.19,99,55,000/-ಗಳ ಪರಿಹಾರದ ಹಣವನ್ನು ಎರಡು ಬಾರಿ ಅಕ್ರಮವಾಗಿ ಪಾವತಿಸಿರುವ ಬಗ್ಗೆ | ಸಿ.ಐ.ಡಿ. ಘಟಕ, ಧಾರವಾಡ ಇವರು ಸದರಿ ಪ್ರಕರಣದ ತನಿಖೆಯನ್ನು ಕೈಗೊಂಡಿದ್ದು, ಈ ಪ್ರಕರಣದಲ್ಲಿ ಅಧಿಕಾರಿ/ಸಿಬ್ಬಂದಿ ಮತ್ತು ಆರೋಪಿಗಳನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿದೆ ಮತ್ತು ಸದರಿ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. |

| ಕ್ರ. ಸಂ. | ಅಧಿಕಾರಿಗಳ ಹೆಸರು ಶ್ರೀ / ಶ್ರೀಮತಿ | ದಾವೆ ದಾಖಲಾದ ಅವಧಿಯಲ್ಲಿ ನಿರ್ವಹಿಸುತ್ತಿದ್ದ ಹುದ್ದೆ | ದೂರು ಸಲ್ಲಿಸಲಾದ ಪ್ರಾಧಿಕಾರ ಮತ್ತು ಸಂಖ್ಯೆ | ಪ್ರಕರಣದ ಸ್ವರೂಪ | ಪ್ರಕರಣದ ಪ್ರಸ್ತುತ ಸ್ಥಿತಿ |
|---|---|---|---|---|---|
| | | | | ವಿದ್ಯಾಗಿರಿ ಪೊಲೀಸ್ ಠಾಣೆ, ಧಾರವಾಡ ಜಿಲ್ಲೆ ಇಲ್ಲಿ ಐಪಿಸಿ ಕಲಂ 406, 409, 419, 420, 465, 467, 468, 471, 201 ಸಹ ಕಲಂ 34 ರನ್ವಯ ದಿನಾಂಕ: 20.12.2022 ರಂದು ಎಫ್.ಐ.ಆರ್. ಸಂಖ್ಯೆ: 0251/2022 ರಂತೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿರುತ್ತದೆ. | |

Secretary-I
Karnataka Industrial Areas Development Board
Bengaluru - 560 001.